| | |
|---|---|
| ಪ್ರಾಸಾ | 05 |
| ಚಾಸಾ | 09 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023**

(1 ಮತ್ತು 2 ನೇ ಆರೋಪಿತರನ್ನು ವಿ.ಸಿ ಮುಖಾಂತರ ವಿಚಾರಣೆಗೆ ಹಾಜರುಪಡಿಸಲಾಗಿದೆ)

**ದಿನಾಂಕ: 06.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿಚಂದ್ರ |
| ತಂದೆ ಹೆಸರು | : | ಲಕ್ಷ್ಮಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ವಾಸಸ್ಥಳ | : | ಬೈರಗಾನಹಳ್ಳಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ಪ್ರಾಸಾ-1 ರಿಂದ 4, ಚಾಸಾ-2,3,6,8 ಮತ್ತು10 ಗೊತ್ತು. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿತರ ಪೈಕಿ 1 ನೇ ಆರೋಪಿ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ 3 ಮತ್ತು 4 ನೇ ಆರೋಪಿತರು ಗೊತ್ತು. 6 ನೇ ಆರೋಪಿಯನ್ನು ನೋಡಿರುತ್ತೇನೆ. **(6 ನೇ ಆರೋಪಿಯ ಗುರುತಿನ ಬಗ್ಗೆ ತಮ್ಮ**

| | |
|---|---|
| ಪ್ರಾಸಾ | 05 |
| ಚಾಸಾ | 09 |

**ತಕರಾರು ಇರುವುದಿಲ್ಲವೆಂದು, 6 ನೇ ಆರೋಪಿತರ ಪರ ವಕಿಲಕರು ಹೇಳಿರುತ್ತಾರೆ).**

**2.** ಮೃತ ನಾರಾಯಣಸ್ವಾಮಿ ನನ್ನ ಚಿಕ್ಕಪ್ಪ, ಅವರು ಶಿಡ್ಲಘಟ್ಟದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು. ಒಂದು ವರ್ಷದ ಹಿಂದೆ ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ, ಸುರೇಶ್ ರವರ ಜಮೀನಿನಲ್ಲಿ ನಾರಾಯಣಸ್ವಾಮಿ ರವರ ಕೊಲೆಯಾಗಿದೆ ಎಂದು ಊರಿನ ಜನ ಮಾತನಾಡಿಕೊಳ್ಳುತ್ತಿದ್ದರು. ಊರಿನ ಜನ ಸದರಿ ಸ್ಥಳಕ್ಕೆ ಹೋಗುತ್ತಿದ್ದಾಗ, ನಾನು ಸಹ ಅಲ್ಲಿಗೆ ಹೋಗಿರುತ್ತೇನೆ. ನಾವು ಸ್ಥಳಕ್ಕೆ ಹೋದಾಗ ನಾರಾಯಣಸ್ವಾಮಿರವರ ಶವ ಇತ್ತು. ಅವರ ಕುತ್ತಿಗೆಯ ಭಾಗದಲ್ಲಿ ರಕ್ತವಿತ್ತು. ನಾವೆಲ್ಲಾ ಅಲ್ಲಿ ಅದನ್ನು ನೋಡಿಕೊಂಡು ನಿಂತಿದ್ದೆವು.

**3.** ಯಾವ ಕಾರಣಕ್ಕೆ ನಾರಾಯಣಸ್ವಾಮಿ ರವರ ಕೊಲೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಯಾರು ನಾರಾಯಣಸ್ವಾಮಿರವರನ್ನು ಕೊಲೆ ಮಾಡಿದ್ದರೆಂದು ಗೊತ್ತಿಲ್ಲ.

| | |
|---|---|
| ಪ್ರಾಸಾ | 05 |
| ಚಾಸಾ | 09 |

**4.** 6 ನೇ ಆರೋಪಿಯು 1 ನೇ ಆರೋಪಿಯನ್ನು ಇಟ್ಟುಕೊಂಡಿದ್ದಾನೆಂದು ಜನರಿಂದ ನನಗೆ ಗೊತ್ತಾಗಿರುತ್ತದೆ, ಸದರಿ ವಿಚಾರದ ಬಗೆಗಿನ ನ್ಯಾಯಪಂಚಾಯ್ತಿಗೆ ನಾನು ಹೋಗಿಲ್ಲ. ಸದರಿ ನಾರಾಯಣಸ್ವಾಮಿರವರು 6 ನೇ ಆರೋಪಿ ಹಾಗೂ 1 ನೇ ಆರೋಪಿಯ ನಡುವಿನ ವಿಚಾರದಲ್ಲಿ ಮಾಡಿದ ನ್ಯಾಯಪಂಚಾಯ್ತಿಗೆ ನಾನು ಯಾವುದೇ ಸ್ಥಳಗಳಿಗೆ ಹೋಗಿಲ್ಲ.

**5.** ಘಟನೆಯ ಬಗ್ಗೆ ತಿಳಿದುಕೊಂಡು ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಬೇರೆ ವಿಚಾರ ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**

**6.** 6 ನೇ ಆರೋಪಿ ಹಾಗೂ 1 ನೇ ಅರೋಪಿಯೊಂದಿಗೆ ಅಕ್ರಮ ಸಂಬಂಧದ ವಿಚಾರವು ಚಾಸಾ-8 ರವರಿಗೆ ತಿಳಿದು, ಜಗಳವಾಗಿ ಈ ಬಗ್ಗೆ ನಾರಾಯಣಸ್ವಾಮಿರವರು ನಮ್ಮ ಊರಿನಲ್ಲಿ ಪಂಚಾಯ್ತಿ ಮಾಡಿದಾಗ ನಾನು ಹೋಗಿದ್ದೆನು ಎಂದರೆ ಸರಿಯಲ್ಲ. 3 ನೇ ಆರೋಪಿಯ ರೇಷ್ಮೆ ಹುಳು ಮನೆಯ

| | |
|---|---|
| ಪ್ರಾಸಾ | 05 |
| ಚಾಸಾ | 09 |

ಬಳಿ ನಾರಾಯಣಸ್ವಾಮಿ ನ್ಯಾಯಪಂಚಾಯ್ತಿ ಮಾಡಿದ್ದಾಗ 1 ನೇ ಆರೋಪಿಗೆ ಚಾಸಾ-8 ರವರು ಹೊಡೆದಿದ್ದು, ಸದರಿ 1 ನೇ ಆರೋಪಿಯು ಚಾಸಾ-8 ರವರನ್ನು ಬಿಡುವುದಿಲ್ಲವೆಂದು ಹೇಳಿದಾಗ ಚಾಸಾ-8 ರವರು, ತನ್ನ ಹೆಂಡತಿಗೆ ಮೊಬೈಲ್ ನ್ನು ಏಕೆ ಬಿಸಾಡಿದೆ ಎಂದು ಪ್ರಶ್ನಿಸಿದಾಗ, ಮಾತಿನ ಚಕಮಕಿ ನಡೆಯಿತು ಎಂದರೆ ಸರಿಯಲ್ಲ. ಸದರಿ ನ್ಯಾಯಪಂಚಾಯ್ತಿಯಲ್ಲಿ ನಾನು ಭಾಗವಹಿಸಿದ್ದೆನು ಎಂದರೆ ಸರಿಯಲ್ಲ. ಸದರಿ ಪಂಚಾಯ್ತಿಯಲ್ಲಿ ನಾರಾಯಣಸ್ವಾಮಿರವರು 6 ನೇ ಆರೋಪಿ ಕಡೆಯಿಂದ ದೂರು ಕೊಡಿಸುವುದಾಗಿ ತಿಳಿಸಿದ್ದರಿಂದ ರಾಜಿ ಪಂಚಾಯ್ತಿ ಆಗಿಲ್ಲ ಎಂದರೆ ಸಾಕ್ಷಿಯು ಸದರಿ ಪಂಚಾಯ್ತಿತಿಗೆ ನಾನು ಹೋಗಿಲ್ಲ ಎಂದು ಹೇಳುತ್ತಾರೆ. ಮೂರು ದಿನಗಳ ನಂತರ ನಾರಾಯಣಸ್ವಾಮಿ 6 ನೇ ಆರೋಪಿಯ ಮೂಲಕ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ಕೊಡಿಸಿದಾಗ ಸದರಿ ನಾರಾಯಣಸ್ವಾಮಿ ಹಾಗೂ ಇತರರೊಂದಿಗೆ ನಾನು ಸಹ ದಿಬ್ಬೂರಹಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದೆನು ಎಂದರೆ ಸರಿಯಲ್ಲ. ಸದರಿ ಠಾಣೆಯಲ್ಲಿ 6 ನೇ ಆರೋಪಿಯು ಸದರಿ ಅಕ್ರಮ ಸಂಬಂಧದ ಬಗ್ಗೆ ಹೇಳದೆ ಇದ್ದುದರಿಂದ ಹಾಗೂ ನಾರಾಯಣಸ್ವಾಮಿರವರು ಹೇಳಿದ್ದರಿಂದ ದೂರು ನೀಡಿದ್ದೆನೆಂದು ಹೇಳಿದ್ದರು ಎಂದರೆ ಸಾಕ್ಷಿಯು ತಾನು ಪೊಲೀಸ್ ಠಾಣೆಗೆ ಹೋಗಿಲ್ಲ ಎಂದು ಹೇಳುತ್ತಾರೆ.

| | |
|---|---|
| ಪ್ರಾಸಾ | 05 |
| ಚಾಸಾ | 09 |

ನಂತರ 6 ನೇ ಆರೋಪಿಯ ಕುಮ್ಮಕ್ಕಿನಿಂದ 1 ರಿಂದ 3 ನೇ ಆರೋಪಿತರು, ನಾರಾಯಣಸ್ವಾಮಿರವರು ಶಿಡ್ಲಘಟ್ಟದಿಂದ ಬರುತ್ತಿರುವಾಗ ಖಾರದ ಪುಡಿ ಎರಚಿ, ಮಚ್ಚು ಹಾಗೂ ಚಾಕುವಿನಿಂದ ನಾರಾಯಣಸ್ವಾಮಿರವರನ್ನು ಹೊಡೆದು, ಕೊಲೆ ಮಾಡಿದ್ದರೆಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. 1 ರಿಂದ 5 ನೇ ಆರೋಪಿತರು ಸಂಚು ರೂಪಿಸಿ 6 ನೇ ಆರೋಪಿಯ ಕುಮ್ಮಕ್ಕಿನಿಂದ ನಾರಾಯಣಸ್ವಾಮಿ ರವರನ್ನು ಕೊಲೆ ಮಾಡಿದ್ದರೆಂದು, ಪೊಲೀಸರಿಗೆ ನಾನು ಹೇಳಿಕೆ ನೀಡಿದ್ದೆನೆಂದರೆ ಸರಿಯಲ್ಲ. ದಿ: **07.10.2023** ರಂದು ಪೊಲೀಸರಿಗೆ ಘಟನೆ ಬಗ್ಗೆ ವಿವರವಾಗಿ ಹೇಳಿಕೆಯನ್ನು ನೀಡಿದ್ದೇನೆಂದರೆ ಸರಿಯಲ್ಲ**.** ಸಾಕ್ಷಿಗೆ ಹೇಳಿಕೆಯ " ನಮ್ಮ ಗ್ರಾಮದ **..............................** ನೋಡಿದರೆ ಗುರುತಿಸುತ್ತೇನೆ" ಎಂಬ ಭಾಗವನ್ನು ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಓದಿ ಹೇಳಿದ್ದು**,** ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿರುವುದರಿಂದ ಸದರಿ ಭಾಗವನ್ನು ನಿಪಿ **14** ಎಂದು ಗುರುತಿಸಲಾಯಿತು**.** ಸದರಿ ಪಂಚಾಯ್ತಿಯಲ್ಲಿ ನಾನು ಭಾಗವಹಿಸಿದ್ದು**,** ಘಟನೆಯ ಬಗ್ಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 05 |
| ಚಾಸಾ | 09 |

**ಪಾಟೀ ಸವಾಲು: 1 ರಿಂದ 4ನೇ ಆರೋಪಿತರ ಪರ ಶ್ರೀಎಂಜಿ ಎಸ್ ಆರ್ ವಕೀಲರಿಂದ:**

**7.** ಸದರಿ 1ನೇ ಆರೋಪಿ ಹಾಗೂ 6ನೇ ಆರೋಪಿಯ ನಡುವಿನ ಅಕ್ರಮ ಸಂಬಂಧವನ್ನು ಸ್ಥಳದಲ್ಲಿ ಯಾರು ಮಾತನಾಡಿಕೊಳ್ಳುತ್ತಿದ್ದರೆಂದು ನಿಖರವಾಗಿ ನಾನು ಹೇಳಲಾಗುವುದಿಲ್ಲ. ಸದರಿ ಊರಿನ ಜನ 1ನೇ ಆರೋಪಿ ಹಾಗೂ 6ನೇ ಆರೋಪಿಯ ನಡುವಿನ ಸಂಬಂಧವನ್ನು ಮಾತನಾಡಿಕೊಳ್ಳುತ್ತಿದ್ದರೆಂದು ಪೊಲೀಸರಿಗೆ ನಾನು ಹೇಳಿಲ್ಲ. ಸದರಿ ವಿಚಾರವನ್ನು ನಾನು ಪ್ರಥಮ ಬಾರಿಗೆ ಈ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸ್ಥಳದಲ್ಲಿ ಯಾರು ಸಹ 1ನೇ ಆರೋಪಿ ಹಾಗೂ 6ನೇ ಆರೋಪಿಯ ಸಂಬಂಧದ ಬಗ್ಗೆ ಯಾರು ಸಹ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: 5ನೇ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದ:**

ಕುಮಾರಿ ಇ.ವಿ. ವಕೀಲರು ಶ್ರೀ ಕೆ.ಎಂ.ಎಂ ವಕೀಲರ ಪರ, 1 ರಿಂದ 4ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿದೆ.

| | |
|---|---|
| ಪ್ರಾಸಾ | 05 |
| ಚಾಸಾ | 09 |

**<u>ಪಾಟೀ ಸವಾಲು: 6 ನೇ ಆರೋಪಿ ಪರ ಶ್ರೀಹೆಚ್ ಸಿ ಪಿ ವಕೀಲರಿಂದ:</u>**

1 ರಿಂದ 4 ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು 6 ನೇ ಆರೋಪಿ ಪರ ವಕೀಲರು ಕೋರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿದೆ.

**<u>ಮರುವಿಚಾರಣೆ: ಇಲ್ಲ.</u>**

**(ದಿನಾಂಕ: 06.08.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**